ವಿಷಯಕ್ಕೆ ವ್ಯಯವಾಗಿದೆ. ಇದರಲ್ಲಿ ಅನೇಕ ಸಹಾಯ್ಯಗಳಿವೆ.

ಶ್ರೀ ಎನ್. ಸೂರ್ಯನಾರಾಯಣ ರಾವ್.—ಸಾಹೆರಾರು, ಲಕ್ಷಾಂತರ ಜನ ಕಾರ್ಮಿಕರಿಗೆ ಸಂಬಂಧ ಪಟ್ಟ ಪ್ರಶ್ನೆಯನ್ನು ಹಾಗೆಯೇ ಬಿಟ್ಟು ಬಿಟ್ಟರೆ ನಾವು ಸುಮ್ಮನೆ ಬಂದು 50 ರೂಪಾಯಿ ಭತ್ಯೆ ತೆಗೆದು ಕೊಂಡ ಹಾಗೆ ಆಗುತ್ತದೆ.

ಅಧ್ಯಕ್ಷರು.—ಇವತ್ತು ಬಂದಿರತಕ್ಕಂಥ ಪ್ರಶ್ನೆಗಳು ಈ ಪಟ್ಟಿಯಲ್ಲಿ ಬಂದಿವೆ. ಬ್ಯಾಲೆಟ್ ಹಾಕಿ ತೆಗೆದುಕೊಂಡ ಪ್ರಶ್ನೆಗಳಲ್ಲ. 19-20 ಪ್ರಶ್ನೆಗಳಿದ್ದವು. ಒಂದೆರಡು ಪ್ರಶ್ನೆಗಳಿಗೆ ಬಿಟ್ಟು ಉಳಿದೆಲ್ಲಾ ಪ್ರಶ್ನೆಗಳಿಗೆ ಉತ್ತರಗಳು ಬಂದಿವೆ. ಈ ಎಲ್ಲಾ ಪ್ರಶ್ನೆಗಳು ಸದನದ ಒಂದು ಭಾಗವಾಗಿ ಆಚ್ಛಾಗುತ್ತವೆ ಮತ್ತು ನಿಮಗೆ ಉತ್ತರ ಸಿಕ್ಕಿರುತ್ತದೆ. ಉಪಪ್ರಶ್ನೆಗಳನ್ನು ಕೇಳಲಿಕ್ಕೆ ಕಾಲಾವಕಾಶ ಕಡಿಮೆಯಾಗುತ್ತದೆ ಎಂಬುದನ್ನು ನಾನು ಕೂಡ ಒಪ್ಪುತ್ತೇನೆ. ಆದರೆ ನಾನಾದರೂ ಕೂಡ ನೀವು ಮಾಡಿರತಕ್ಕ ಕಾನೂನಿನ ವ್ಯಾಪ್ತಿಯೊಳಗೆ ಕೆಲಸ ಮಾಡಬೇಕಾಗುತ್ತದೆ. ಕಾನೂನನ್ನು ಮಾಡಿದಂಥ ನೀವೇ ಅದನ್ನು ಮುರಿಯತಕ್ಕದ್ದು ಸರಿಯಲ್ಲ. ಏನಾದರೂ ಬದಲಾವಣೆ ಆಗಬೇಕು ಎನ್ನುವಂತಿದ್ದರೆ ಅದರ ಬಗ್ಗೆ ಸಲಹೆ ಮಾಡಬೇಕೇ ಹೊರತು, ವ್ಯಾಖ್ಯಾನ ಮಾಡುವುದು ಸರಿಯಲ್ಲ. It is not in the hands of the Speaker.

ಶ್ರೀ ಎಂ. ಎಸ್. ಕೃಷ್ಣನ್.—ಪ್ರಶ್ನೋತ್ತರ ಅವಧಿಯಲ್ಲಿ ಸಂತಾಪ ಸೂಚನೆ ಬಂದರೂ ಸಹ ಅದು ಆದರಲ್ಲಿ ಸೇರಿಕೊಳ್ಳುತ್ತದೆ ಎಂದು ತಾವು ಹೇಳಿದ್ದೀರಿ. ಆದರೆ ರೂಲ್ಸ್ ಆಫ್ ಪ್ರೊಸೀಜರ್‌ನಲ್ಲಿ ಡಿಸ್ಕ್ರಷನ್ ಎಕ್ಸ್‌ಟೆಂಡ್ ಮಾಡುವುದಕ್ಕೆ ತಮಗೆ ಅಧಿಕಾರ ಇದೆ.

ಅಧ್ಯಕ್ಷರು.—ಹಾಗೆ ಎಲ್ಲಿದೆ ಅಂತ ಹೇಳ್ಬಿಡಿ.

ಶ್ರೀ ಎಂ. ಎಸ್. ಕೃಷ್ಣನ್.—ಸಸ್ಪೆನ್‌ಶನ್ ಆಫ್ ರೂಲ್ಸ್ ಅಂತ ಇದೆ ನೋಡಿ. ಅದರಲ್ಲಿ ...

Sri A. Laxmi Sagar —Suspension of rules is not during question hour. It arises during some other time.

ಅಧ್ಯಕ್ಷರು.—ಶ್ರೀ ಬಂಗಾರಪ್ಪನವರು ಮಾಡಿರುವ ಸಲಹೆಯನ್ನು ವಿಚಾರ ಮಾಡೋಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಸಭೆಯಲ್ಲಿ ಕೊಡಲಾದ ಲಿಖಿತ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್ :—(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು).—ಲಿಖಿತ ಮೂಲಕ ಉತ್ತರಿಸುವ ಮೊದಲನೆಯ ಪಟ್ಟಿ ಪ್ರಶ್ನೆಗಳನ್ನು ಸಭೆಯ ಮುಂದೆ ಇಡುತ್ತೇನೆ.

ವಿಷಯ : ಬೆಂಗಳೂರು ನಗರದಲ್ಲಿರುವ ಉಡುಪು ತಯಾರಿಕೆಯ ಕಾರ್ಖಾನೆಗಳು

ಪ್ರಶ್ನೆ 1(41) ಶ್ರೀ ಎಸ್. ಸೂರ್ಯನಾರಾಯಣ ರಾವ್ (ವರ್ತೂರು).—ಮಾನ್ಯ ಕಾರ್ಮಿಕ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.—

ಅ) ಬೆಂಗಳೂರು ನಗರದಲ್ಲಿ ಎಷ್ಟು ಉಡುಪು ತಯಾರಿಕೆಯ ಕಾರ್ಖಾನೆಗಳಿವೆ ;

ಆ) ಅವುಗಳಲ್ಲಿ ಎಷ್ಟು ಕಾರ್ಖಾನೆಗಳಲ್ಲಿ ಕಾರ್ಮಿಕ ಕಾನೂನುಗಳನ್ನು ಅನ್ವಯಿಸಲಾಗಿದೆ ;

ಇ) ಎಲ್ಲಾ ಕಾರ್ಖಾನೆಗಳಿಗಿದ್ದ ಕಾರ್ಮಿಕ ಕಾನೂನುಗಳನ್ನು ಅನ್ವಯಿಸಲು ಸರಕಾರದವರು ಕೈಗೊಂಡ ಕ್ರಮಗಳೇನು ;

ಈ) ಈ ಉದ್ಯಮಗಳಲ್ಲಿ ನಿರತರಾಗಿರುವ ಮಹಿಳಾ ಕಾರ್ಮಿಕರ ಸಂಖ್ಯೆ ಎಷ್ಟು ?

ಉತ್ತರ.— ಶ್ರೀ ಅಜೀಜ್ ಸೇಟ್ (ಕಾರ್ಮಿಕ ಮತ್ತು ವಕ್ಫ್ ಮಂತ್ರಿಗಳು).—

ಅ) ಒಟ್ಟು 88 ನೊಂದಾಯಿಸಲ್ಪಟ್ಟ ಕಾರ್ಖಾನೆಗಳಿವೆ.

ಆ) ನೊಂದಾಯಿಸಲ್ಪಟ್ಟ ಎಲ್ಲಾ ಕಾರ್ಖಾನೆಗಳಲ್ಲಿ ಕಾರ್ಮಿಕ ಕಾನೂನುಗಳನ್ನು ಅನ್ವಯಿಸಲಾಗಿದೆ

ಇ) ಕಾರ್ಖಾನೆಯ ಪರಿವೀಕ್ಷಕರು ನೊಂದಾಯಿಸಲ್ಪಟ್ಟಿರುವ ಕಾರ್ಖಾನೆಗಳನ್ನು ಪರಿವೀಕ್ಷಿಸಿ, ಈ ಕಾರ್ಖಾನೆಗಳಲ್ಲಿ ಕಂಡು ಬಂದ ಕಾನೂನು ಉಲ್ಲಂಘನೆಗಳ ಬಗ್ಗೆ ಉದ್ದಿಮೆದಾರರಿಗೆ ಪತ್ರ ಬರೆದು ತಪ್ಪುಗಳನ್ನು ಸರಿಪಡಿಸಲು ಸಲಹೆ ನೀಡಿರುತ್ತಾರೆ. ಸಲಹೆ ನೀಡಿದ ನಂತರವೂ, ಕಾನೂನು ಪರಿಪಾಲನೆಯಲ್ಲಿ ಉದ್ದಿಮೆದಾರರು ಆಸಕ್ತಿ ತೋರಿಸದಿರುವ ಸಂದರ್ಭದಲ್ಲಿ, ಅಂತಹ ಉದ್ದಿಮೆದಾರರ ಮೇಲೆ ಕಾನೂನು ರೀತ್ಯ ಕ್ರಮವನ್ನು ಕೈಗೊಳ್ಳಲಾಗಿದೆ.

ಈ) ನೊಂದಾಯಿಸಲ್ಪಟ್ಟಿರುವ ನಿರತರಾಗಿರುವ ಮಹಿಳಾ ಕಾರ್ಮಿಕರ ಸಂಖ್ಯೆ 88 ಕಾರ್ಖಾನೆಗಳಲ್ಲಿ ಒಟ್ಟು 5344.

ವಿಷಯ : ರಾಜ್ಯದ ಹತ್ತಿ ಗಿರಣಿ ಕಾರ್ಮಿಕರಿಗೆ ವೇತನ ಹೆಚ್ಚಳ

ಪ್ರಶ್ನೆ 2(48) ಶ್ರೀ ಪಂಪಾಪತಿ (ದಾವಣಗೆರೆ) .—ಮಾನ್ಯ ಕಾರ್ಮಿಕ ಹಾಗೂ ವಕ್ಫ್ ಮಂತ್ರಿ